ಬಂದವರು ಸೀದಾ ನಮ್ಮ ಮನೆಗೇ ಬಂದರು. 'ಇಲ್ಲಿ ನೋಡಿಯೇ ಮನೆಗೆ ಹೋದರಾಯಿತು' ಎಂದು ಬಂದರಂತೆ ಅವರು. ಎಷ್ಟು ಹೊತ್ತಿನಿಂದ ಪ್ರಜ್ಞೆ ಬಂದಿದೆ, ಬರೆದಿಟ್ಟ ತಾಪಮಾನ ಯಾವಾಗಿನಿಂದ ಇಳಿಕೆ ಕಂಡು ಬರುತ್ತಿದೆ ಎಲ್ಲವನ್ನೂ ಸಾವಧಾನವಾಗಿ ಪರೀಕ್ಷಿಸಿ, "ಶಾಸ್ತ್ರಿಗಳೇ, ಇನ್ನು ಹೆದರಿಕೆಗೆ ಕಾರಣ ಇಲ್ಲ ಅನ್ನಿಸ್ತಿದೆ. ಹುಡುಗ ಹುಷಾರಾಗ್ತಾನೆ. ಆದರೆ, ವಿಶ್ರಾಂತಿ ಬೇಕೇ ಬೇಕು, ಪಥ್ಯ ಪಾಲಿಸಬೇಕು" ಎಂದರು.

ಈವರೆಗೆ ಅವರು ಎಂದೂ ಏನೂ ಆಹಾರ ನಮ್ಮ ಮನೆಯಲ್ಲಿ ಸೇವಿಸಿಯೇ ಇರಲಿಲ್ಲ. ಅಂದು ನಮ್ಮ ಮನೆಯಲ್ಲಿ ಚಹಾ ಕೇಳಿ ಮಾಡಿಸಿಕೊಂಡು ಕುಡಿದುಹೋದರು. ಅವರು ಹೋದಮೇಲೆ ಸ್ನಾನ ಮುಗಿಸಿ ದಿನದ ಜಪ, ಪೂಜೆ ಸಮಾಧಾನದಲ್ಲಿ ಮಾಡಿಮುಗಿಸಿದೆ. ಆ ಹೊತ್ತಿಗೆ ಪ್ರಹ್ಲಾದ ಇನ್ನಷ್ಟು ಚೇತರಿಸಿಕೊಂಡಿದ್ದ. ಆದರೂ ನನ್ನೊಳಗೇ ನನಗೆ ವಿಶ್ವಾಸವಿಲ್ಲ. ನಿಜಕ್ಕೂ ಇವನು ಪೂರ್ತಿ ಗುಣವಾಗುತ್ತಾನಾ? ಅಥವಾ ಎಲ್ಲವೂ ಭ್ರಮೆ ಎನಿಸಿಬಿಟ್ಟೀತೋ?

ಸಂಜೆ ನರಸಿಂಹ ದೇವರ ಗುಡಿಗೆ ಹೋದೆ. ಆಗಲೇ ಯಾರೋ ದೀಪ ಹಚ್ಚಿಟ್ಟು ಹೋಗಿದ್ದರು. ಅಷ್ಟು ಹೊತ್ತು ಕೈ ಮುಗಿದುಕೊಂಡು ಕುಳಿತೆ. ಬಳಿಕ ಪ್ರದಕ್ಷಿಣೆ ಬಂದು ಎಂದಿನಂತೆ ಕಟ್ಟೆ ಮೇಲೆ ಕುಳಿತು ಮನಸಿನಲ್ಲೇ ಮಂತ್ರಗಳನ್ನು ಹೇಳಿಕೊಂಡೆ. ಅದಾದ ಮೇಲೆ ಮತ್ತೆ ಒಳಗೆ ಹೋಗಿ ಸಾಷ್ಟಾಂಗ ನಮಸ್ಕಾರ. ಹೀಗೆ ನನ್ನದೊಂದು ಕ್ರಮ. ಅದೇ ಥರ ಮಾಡಿ ಎದ್ದು ನಿಂತುಕೊಂಡವನಿಗೆ, 'ನಂಬಿದ ಸ್ವಾಮಿ ನಮ್ಮ ಕೈ ಬಿಡಲಿಲ್ಲ' ಅನ್ನಿಸಿತು. ಕನಸಿನಲ್ಲಿ ಬಂದು, "ನೀನು ನನ್ನನ್ನು ಬೈದಿದ್ದು ತಪ್ಪು" ಅಂದು ಹೋದ ನನ್ನಪ್ಪ ಇವನೇ ಅಲ್ಲವೆ? – ನೆನಪಾಗಿ ತಡೆಯಲಾಗದೆ ಅತ್ತುಬಿಟ್ಟೆ. "ನಾನೆಂಥ ತಪ್ಪು ಮಾಡಿಬಿಟ್ಟೆ. ನಿನ್ನನ್ನು ಹೀನಾಮಾನ ಬೈದೆ. ಪ್ರಪಂಚದಲ್ಲಿ ಎಷ್ಟು ಜನ ತಮ್ಮವರನ್ನು ಕಳೆದುಕೊಂಡಿಲ್ಲ! ಅವರೆಲ್ಲಾ ನನ್ನ ಹಾಗೆ ದೇವರಿಗೆ ಬೈದುಬಿಡುವುದೆ? ದೇವರನ್ನು ಅಷ್ಟು ಅಗ್ಗ ಮಾಡಿಬಿಟ್ಟೆನೇ?" ಎಂದು ಹೊರಗಿನ ಕಂಬವೊಂದಕ್ಕೆ ಅದೆಷ್ಟೋ ಹೊತ್ತು ತಲೆ ಚಚ್ಚಿಕೊಂಡು ಅಳುತ್ತಲೇ ಇದ್ದೆ. ನನ್ನಷ್ಟಕ್ಕೇ ಸಮಾಧಾನವನ್ನೂ ಮಾಡಿಕೊಂಡೆ. "ಬಿಡು ನನ್ನಪ್ಪಾ, ಇನ್ನೂ ಎಂತೆಂಥ ಮೂರ್ಖರನ್ನು ನೀನು ಕ್ಷಮಿಸಿದ್ದೀಯೋ! ನನ್ನನ್ನು ಕ್ಷಮಿಸುವುದಿಲ್ಲವೇನು?" ಮತ್ತೊಂದು ಸುತ್ತು ನನಗೆ ಬಾಯಿಗೆ ಬರುವ ಎಲ್ಲ ಮಂತ್ರಗಳನ್ನೂ ಹೇಳಿಕೊಂಡೆ. ಕತ್ತಲಾದ ಮೇಲೆ ಮನೆಗೆ ಮರಳಿದೆ.

ಇಷ್ಟೆ ಸ್ವಾಮಿ, ನಾನು ಹೇಳಬೇಕೆಂದಿದ್ದ ಕಥೆ. ಮಹಾ ಕೋಪಿಷ್ಠ. ಸಿಟ್ಟು ಬಂದರೆ ದೇವರ ಮುಖಾನೂ ನೋಡದ ಆಸಾಮಿ. ನಿಮಗೆ ಇವೆಲ್ಲವೂ ನಂಬಿಕೆಯ ಮಾತು ಅನ್ನಿಸಬಹುದು. ನೀವು ಹೇಳುವುದು ಸರಿಯಾಗಿದೆ. ನಾನು ಇದೆಲ್ಲವನ್ನೂ ಯಾರಿಗೂ ಹೇಳಲು ಹೋಗಿರಲಿಲ್ಲ. ಘಟನೆ ನಡೆದು ಎಷ್ಟೋ ವರ್ಷಗಳ ಬಳಿಕ ಇದನ್ನು ಹೇಳಿದರೆ ನನ್ನ ಮಗನೂ ನಿಮ್ಮ ಹಾಗೇ ಹೇಳಿದ. ಅಷ್ಟು ಹೊತ್ತಿಗೆ ಅವನು ಕಾಲೇಜು ಅಧ್ಯಾಪಕನಾಗಿದ್ದ, ಮದುವೆಯಾಗಿದ್ದ. ನನಗೆ ಇನ್ನೇನು ಬೇಕು? ಅವನು, ಅವನ ಕುಟುಂಬ... ಎಲ್ಲಾ ಚೆನ್ನಾಗಿದ್ದರೆ ಆಯಿತು. ನನಗೆ ನನ್ನ ದೇವರಿದ್ದಾನೆ. 'ನಂಬಿಕೆಯ ಮಾತು' ಅಂದಿರಲ್ಲ, ಖಂಡಿತ ಹೌದು, ಆದರೆ ನಂಬಿಕೆ ದೊಡ್ಡದು ಅಂತ ನಿಮಗೆ ಅನ್ನಿಸುವುದಿಲ್ಲವೊ?

### ಚಿಂತಾಮಣಿ ಕೊಡ್ಲೆಕೆರೆ

ಕವಿ, ಕತೆಗಾರ, ಪ್ರಬಂಧಕಾರ, ವಿಮರ್ಶಕ ಚಿಂತಾಮಣಿ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದವರು. 'ಬಭ್ರುವಾಹನ ಎಂಬ ಇರುವೆ', 'ಮಾಯಾವಿ ಮಾಂಗಿ' ಅವರ ಕಥಾಸಂಗ್ರಹಗಳು, 'ಸಿಂಡ್ರೆಲಾ ಅಂಬ್ರೆಲಾ' ಮಕ್ಕಳ ಕವಿತೆಗಳ ಗುಚ್ಛ. 'ಅಂತರಂಗದ ಆಕಾಶ' ಸಂಶೋಧನಾ ಪ್ರಬಂಧ. 'ಮೊದಲ ಮನೆಯ ಮೆಟ್ಟಿಲು', 'ಟಪಾಲು ಬಸ್ಸು' ಪ್ರಬಂಧ ಸಂಗ್ರಹಗಳು. ಬಿಎಸ್‌ಎನ್‌ಎಲ್‌ನ ನಿವೃತ್ತ ಉದ್ಯೋಗಿ.